ಸರ್ವವಿದ್ಯಾಪಾರಂಗತನಾದ ಎನಿಸಿದ ಕೂಡಲೇ ಪರಾಶರರು ತಪಸ್ಸು ಮಾಡಲು ಹಿಮಾಲಯದತ್ತ ಹೊರಡುತ್ತಾರೆ. ವ್ಯಾಸರೂ ಅವರನ್ನು ಅನುಸರಿಸಿಕೊಂಡು ಬದರಿಯವರೆಗೂ ಹೋಗುತ್ತಾರೆ. ಬದರಿಕಾಶ್ರಮದಲ್ಲಿ ನೆಲೆಸಿ, ವೇದಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ, ಅಷ್ಟಾದಶ ಪುರಾಣಗಳು, ಬ್ರಹ್ಮಸೂತ್ರಗಳು ಹಾಗೂ ಪಂಚಮವೇದ ಎನ್ನಲಾದ ಮಹಾಭಾರತವನ್ನು ರಚಿಸುತ್ತಾರೆ. ಬದರಿಯಲ್ಲಿ ಬಹುಕಾಲ ನೆಲೆಸಿದ್ದರಿಂದ ಅವರನ್ನು ಬಾದರಾಯಣ ಎಂದೂ, ವೇದಗಳನ್ನು ವಿಂಗಡಿಸಿದ್ದರಿಂದ ವೇದವ್ಯಾಸ ಎಂದೂ ಕರೆಯುತ್ತಾರೆ. ಬದರಿಯಲ್ಲಿ ಅವರಿದ್ದ ಗುಹೆ, 'ವ್ಯಾಸಗುಹೆ' ಎಂದು ಇಂದಿಗೂ ಪ್ರಸಿದ್ಧವಾಗಿದೆ. ಇಂಥ ಮಹತ್ ಕಾರ್ಯವನ್ನು ಅವರು ಪೂರ್ಣಗೊಳಿಸಿದ್ದು ಆಷಾಢ ಹುಣ್ಣಿಮೆಯ ದಿನ. ಆದ್ದರಿಂದಲೇ ಅದನ್ನು ವ್ಯಾಸಪೂರ್ಣಿಮೆ ಎನ್ನುವುದು.

ವ್ಯಾಸರು ಸಾಕ್ಷಾತ್ ಪರಶಿವನಿಂದಲೇ 'ಸರ್ವರಿಗೂ ಗುರು' ಎಂದು ಸನ್ಮಾನಿತರಾದವರು. ಆ ಬಗ್ಗೆ ಒಂದು ಸ್ವಾರಸ್ಯಕರವಾದ ಕಥೆ ಇದೆ. ಒಮ್ಮೆ ವ್ಯಾಸರು ಕುಟೀರದಲ್ಲಿ ವಿಶ್ರಮಿಸಿಕೊಳ್ಳುತ್ತಿರುವಾಗ ನಾರದರ ಆಗಮನವಾಗುತ್ತದೆ. ವ್ಯಾಸರು ಅವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ, ಅತಿಥಿ ಸತ್ಕಾರ ಮಾಡುವುದಿಲ್ಲ. ಅವರು ಕೀರ್ತಿಮದದಲ್ಲಿರುವುದು ನಾರದರ ಗಮನಕ್ಕೆ ಬರುತ್ತದೆ. ಅವರು ವ್ಯಾಸರಿಗೆ, 'ನೀವು ಬ್ರಹ್ಮಸೂತ್ರ, ಅಷ್ಟಾದಶ ಪುರಾಣ, ಮಹಾಭಾರತ ಇತ್ಯಾದಿ ಇತ್ಯಾದಿ ಗ್ರಂಥಗಳ ರಚನೆಯಿಂದ ದಣಿದಿದ್ದೀರಿ. ಒಂದಿಷ್ಟು ಯಾತ್ರೆ ಮಾಡಿ, ಮನಸ್ಸಿಗೆ ಉಲ್ಲಾಸವಾಗುತ್ತದೆ' ಎಂದು ಸಲಹೆ ಮಾಡುತ್ತಾರೆ. ವ್ಯಾಸರಿಗೂ ಸರಿ ಎನಿಸಿ, ಯಾತ್ರೆ ಆರಂಭಿಸುತ್ತಾರೆ. ಆದರೆ ಯಾವ ಊರಿನಲ್ಲೂ ಜನ ಅವರನ್ನು ಗಮನಿಸುವುದೇ ಇಲ್ಲ. ಅವರು ನಿರೀಕ್ಷಿಸಿದ್ದಂಥ ಸ್ವಾಗತ ದೊರೆಯುವುದಿಲ್ಲ. ಹೋಗಲಿ, ಈ ಜನಕ್ಕೆ ನನ್ನ ಬೆಲೆ ಗೊತ್ತಿಲ್ಲ ಎಂದುಕೊಂಡು ಕಾಶಿಗೆ ಹೋಗುತ್ತಾರೆ. ಅಲ್ಲೂ ಅದೇ ಪರಿಸ್ಥಿತಿ. ಒಂದೆಡೆ ಹಸಿವು, ಬಾಯಾರಿಕೆ, ಇನ್ನೊಂದೆಡೆ ತಮಗಾದ ಗರ್ವಭಂಗ. ಇದರಿಂದ ಬೇಸತ್ತ ವ್ಯಾಸರು, 'ಕಾಶೀವಾಸಿಗಳಿಗೆ ಯಾವತ್ತೂ ವಿದ್ಯೆ, ಧನ, ಭಕ್ತಿ ಇಲ್ಲದೆ ಹೋಗಲಿ' ಎಂದು ಶಾಪ ಕೊಡಲು ಉದ್ಯುಕ್ತರಾಗುತ್ತಾರೆ. ಆಗ ಒಂದು ಮನೆಯಿಂದ ಒಬ್ಬ ಗೃಹಿಣಿ ಹೊರಕ್ಕೆ ಬಂದು, 'ದಯವಿಟ್ಟು ಹಾಗೆ ಮಾಡಬೇಡಿ. ಬನ್ನಿ, ನಮ್ಮ ಮನೆಯಲ್ಲಿ ಊಟ ಮಾಡಿ ವಿಶ್ರಮಿಸಿಕೊಳ್ಳಿ' ಎಂದು ಆಹ್ವಾನಿಸುತ್ತಾಳೆ. ವ್ಯಾಸರು ಶಿಷ್ಯ ಪರಿವಾರ ಸಮೇತ ಅವರ ಮನೆಗೆ ಹೋಗುತ್ತಾರೆ. ಆ ಮಹಿಳೆ ಎಲ್ಲರಿಗೂ ಬಾಳೆ ಎಲೆಗಳನ್ನು ಹಾಕಿ, ಊಟ ಮಾಡಿ ಎಂದು ಉಪಚರಿಸುತ್ತಾಳೆ. ನೋಡಿದರೆ ಎಲೆಯಲ್ಲಿ ಏನೂ ಇಲ್ಲ. 'ಇದೇನಿದು ವಿಚಿತ್ರ' ಎಂದುಕೊಂಡು ವ್ಯಾಸರು ಆಪೋಶನ ತೆಗೆದುಕೊಂಡ ತಕ್ಷಣ ಅವರ ಎಲೆಯಲ್ಲಿ ಅವರು ಬಯಸಿದ ಭಕ್ಷ್ಯ-ಭೋಜ್ಯಗಳೆಲ್ಲಾ ಪ್ರತ್ಯಕ್ಷವಾಗುತ್ತವೆ. ಅವರ ಶಿಷ್ಯ ಪರಿವಾರಕ್ಕೂ ಅದೇ ಅನುಭವವಾಗುತ್ತದೆ. ಆ ಗೃಹಿಣಿ ಬೇರೆ ಯಾರೂ ಅಲ್ಲ, ಸ್ವತಃ ಅನ್ನಪೂರ್ಣೇಶ್ವರೀ ದೇವಿ. ಪಾರ್ವತೀ-ಪರಮೇಶ್ವರರು ವ್ಯಾಸರಿಗೆ ದರ್ಶನವಿತ್ತು, 'ಸರ್ವಗುರು' ಎಂಬ ಬಿರುದನ್ನು ದಯಪಾಲಿಸುತ್ತಾರೆ.

ನಂತರ ವ್ಯಾಸರು ಧರ್ಮಪ್ರಸಾರಕ್ಕಾಗಿ ಇಡೀ ಭರತ ಖಂಡದಲ್ಲೆಲ್ಲಾ ಸಂಚರಿಸಿದರು. ಸಂತೋಷವಾಗಿರಲು ಅರ್ಥ, ಕಾಮಗಳು ಅಗತ್ಯ. ಆದರೆ ಅದನ್ನು ಧರ್ಮಮಾರ್ಗ, ನ್ಯಾಯ ಮಾರ್ಗದಿಂದ ಸಂಪಾದಿಸಿ; ಅಡ್ಡದಾರಿ ಹಿಡಿಯಬೇಡಿ ಎಂದು ಅವರು ಬೋಧಿಸಿದರು.

ಆಧ್ಯಾತ್ಮಿಕ ತತ್ತ್ವಗಳನ್ನು ತರ್ಕಬದ್ಧವಾಗಿ ವಿಶ್ಲೇಷಿಸಿ, ಸೂತ್ರ ರೂಪದಲ್ಲಿ ರಚಿಸಿದರು. ಅದೇ ಬ್ರಹ್ಮಸೂತ್ರ. ಅದು ಉಪನಿಷತ್ತುಗಳ ಸಾರಸಂಗ್ರಹ. ಅದು ಉಪನಿಷತ್ತುಗಳನ್ನು ಆಧರಿಸಿದ್ದರಿಂದ ವೇದಾಂತ ಸೂತ್ರಗಳು, ವೇದಾಂತದ ಗುರಿ ಬ್ರಹ್ಮಜ್ಞಾನವಾದ್ದರಿಂದ ಬ್ರಹ್ಮಸೂತ್ರಗಳು, ಶರೀರದಲ್ಲಿರುವ ಆತ್ಮಸ್ವರೂಪವನ್ನು ವಿಶ್ಲೇಷಿಸುವುದರಿಂದ ಶಾರೀರಿಕ ಸೂತ್ರಗಳು, ಸಂನ್ಯಾಸಿಗಳಿಗೆ ಅತ್ಯಗತ್ಯವಾದ್ದರಿಂದ ಭಿಕ್ಷುಸೂತ್ರಗಳು, ವ್ಯಾಸರು ರಚಿಸಿದ್ದರಿಂದ ವ್ಯಾಸಸೂತ್ರಗಳು ಅಥವಾ ಬಾದರಾಯಣ ಸೂತ್ರಗಳು ಎಂದೂ ಪ್ರಖ್ಯಾತವಾಗಿದೆ.

ವೇದೋಪನಿಷತ್ತುಗಳು, ಬ್ರಹ್ಮಸೂತ್ರಗಳು ಎಲ್ಲರಿಗೂ ಅರ್ಥವಾಗುವುದಿಲ್ಲ ಎಂದು ಮನಗಂಡಿದ್ದರಿಂದಲೇ ವ್ಯಾಸರು ಪಂಚಮವೇದವಾದ ಮಹಾಭಾರತವನ್ನು ರಚಿಸಿದರು. ಅದು ಸತ್ಯ-ಅಸತ್ಯ, ಹಿಂಸೆ-ಅಹಿಂಸೆ, ಪ್ರೀತಿ-ದ್ವೇಷ, ಧರ್ಮ-ಅಧರ್ಮ, ಹೀಗೆ ದ್ವಂದ್ವಗಳ ಘರ್ಷಣೆಯ ಕಥೆ. ಕೊನೆಗೆ **'ಸತ್ಯಮೇವ ಜಯತೇ, ನಾನೃತಮ್'** ಎಂಬ ವೇದವಾಣಿಗೆ ನಿದರ್ಶನವಾಗಿ ನಿಲ್ಲುತ್ತದೆ. ಜನ ಹೇಗಿರಬೇಕು, ಹೇಗಿರಬಾರದು ಎಂಬ ವಿಧಿ-ನಿಷೇಧಗಳನ್ನು ಹೇಳುವ ವಿಶ್ವಮಾನ್ಯ ಕೃತಿ ಮಹಾಭಾರತ. ಆರಂಭದಲ್ಲೇ ವ್ಯಾಸರು **'ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್'** ಎಂದಿದ್ದಾರೆ. ಮಾನವ ಜೀವನಕ್ಕೆ ಧರ್ಮವೇ ಅಡಿಗಲ್ಲು. ಅದಕ್ಕಿಂತ ದೊಡ್ಡಬಂಧು ಬೇರೆ ಯಾವುದೂ ಇಲ್ಲ ಎಂಬುದನ್ನು ಸಾರಿಸಾರಿ ಹೇಳಿದವರು ವ್ಯಾಸ ಮಹರ್ಷಿಗಳು. ಬದುಕಿನುದ್ದಕ್ಕೂ ಲೋಕಹಿತವನ್ನೇ ಬಯಸಿದವರು ಅವರು. ಜನತೆಯ ಶ್ರೇಯಸ್ಸು-ಪ್ರೇಯಸ್ಸುಗಳಿಗಾಗಿ ಜೀವನ ಧರ್ಮ, ಮಾನವನ ಧ್ಯೇಯ, ಲೋಕನೀತಿಗಳು ಹೇಗಿರಬೇಕೆಂಬುದನ್ನು ಬೋಧಿಸಿದರು.

ವ್ಯಾಸ ಮಹರ್ಷಿಗಳು ಚಿರಂಜೀವಿ. ಆ ವಿಶ್ವಗುರುವಿಗೆ ಭಕ್ತಿ, ಶ್ರದ್ಧೆಯಿಂದ ಕೃತಜ್ಞತೆ ಸಲ್ಲಿಸಲು ಆಷಾಢ ಹುಣ್ಣಿಮೆಯ ದಿನ, ಸಂನ್ಯಾಸಿಗಳು, ಯತಿಗಳು ಚಾತುರ್ಮಾಸ್ಯ ವ್ರತ ಸಂಕಲ್ಪ ಮಾಡುತ್ತಾರೆ.

**ಚಾತುರ್ಮಾಸ್ಯಸಮಂ ನಾಸ್ತಿ ವ್ರತಂ ಲೋಕೇ ಚ ಪಾವನಮ್ ।**
**ಶೃಣ್ವಂತು ಸಾಧವೋ ಭಕ್ತಾಃ ವ್ರತಂ ಇಷ್ಟಾರ್ಥಸಾಧನಮ್ ॥**


ಎನ್ನುವಂತೆ ಚಾತುರ್ಮಾಸ್ಯಕ್ಕೆ ಸಮನಾದ ವ್ರತ, ಬೇರೆ ಯಾವುದೂ ಇಲ್ಲ. ಈ ವ್ರತಾಚರಣೆಯಿಂದ ಸಕಲ ಇಷ್ಟಾರ್ಥ ಸಾಧನೆಯಾಗುತ್ತದೆ. ಅಂದು ಮೊದಲು ವ್ಯಾಸರಿಗೆ ಪೂಜೆ ಮಾಡಿ, ಐವರು ಆಚಾರ್ಯರುಗಳ ಷಟ್ ಪಂಚಕಕ್ಕೆ ಪೂಜೆ ಸಲ್ಲಿಸಲಾಗುತ್ತದೆ. ಅಲ್ಲಿಂದ ಮುಂದಿನ ನಾಲ್ಕು ತಿಂಗಳು ಭಗವಂತನ ಉಪಾಸನೆ, ಆರಾಧನೆ, ಸಾಧನೆಗಳಿಗೆ ಪ್ರಶಸ್ತವಾದ ದಿನಗಳೆಂದು ಪರಿಗಣಿತವಾಗಿವೆ. ಈ ಅವಧಿಯಲ್ಲಿ ಶಾಸ್ತ್ರಾಧ್ಯಯನ, ಭಗವನ್ನಾಮ ಸ್ಮರಣೆ, ಸತ್ಸಂಗಗಳನ್ನು ಶ್ರದ್ಧಾ ಭಕ್ತಿಗಳಿಂದ ಮಾಡಿದರೆ ಖಂಡಿತವಾಗಿಯೂ ಒಳ್ಳೆಯದಾಗುತ್ತದೆ. *

# ದೂರ್ವಾಸರ ಶಾಪ

ಕಥೆ : ಆರ್.ವಿ.


ಚಿತ್ರ : ಶಂಕರ್

**1** ಅತ್ರಿಮುನಿಗಳ ಮಗನಾದ ದೂರ್ವಾಸನು ಕೋಪವೇ ಮೂರ್ತಿವೆತ್ತಂತಿದ್ದನು. ಅವನಿಗೆ ಒಬ್ಬ ಶಿಷ್ಯನಿದ್ದ. ಅವನ ಹೆಸರು ಬೃಹತ್ಸೇನ. ಅವನ ಪತ್ನಿ ಹೇಮಲತಾ. ಒಂದು ದಿನ . . . .




**2** ದೂರ್ವಾಸಮುನಿ ಸ್ನಾನ ಮಾಡಲು ಹೋಗಿದ್ದರು . ಬೃಹತ್ಸೇನ ಅಗ್ನಿಕಾರ್ಯಕ್ಕೆ ಅಣಿಮಾಡುತ್ತಿದ್ದ. ಅವನಿಗೆ ತಲೆನೋವು ಮಿತಿಮೀರಿದ್ದರಿಂದ, ಅವನು ಕಣ್ಣುಮುಚ್ಚಿ ಬಿದಿರಿನ ಕೊಳವೆಯಿಂದ ಒಲೆ ಊದುತ್ತಿದ್ದ.

**3** ಸ್ನಾನ ಮುಗಿಸಿದ ನಂತರ ದುರ್ವಾಸರು ಅಗ್ನಿಯ ಮುಂದೆ ನಿತ್ಯಕರ್ಮ ಮಾಡಲು ಕುಳಿತರು. ಕಣ್ಣುಮುಚ್ಚಿದ್ದ ಬೃಹತ್ಸೇನನಿಗೆ ಇದು ಗೊತ್ತಾಗಲಿಲ್ಲ. ಅವನು ಒಲೆ ಊದಿದಾಗ. . . .




**3** ಕೋಪಗೊಂಡ ದೂರ್ವಾಸರು ಶಿಷ್ಯನಿಗೆ ಶಾಪ ಕೊಟ್ಟರು.



**5** ಬೃಹತ್ಸೇನ ತನ್ನ ಅಪಚಾರಕ್ಕೆ ಕಾರಣ ತಿಳಿಸಿ, ಗುರುಗಳಿಗೆ ಮನವರಿಕೆ ಮಾಡಲು ಯತ್ನಿಸಿದ; ಅವರ ಕ್ಷಮೆ ಬೇಡಿದ. ಆದರೆ ದೂರ್ವಾಸರ ಕೋಪ ತಣಿಯಲಿಲ್ಲ. ಬೃಹತ್ಸೇನ ದುಃಖಿಸುತ್ತಾ ಭಾರವಾದ ಹೃದಯದಿಂದ ತನ್ನ ಕುಟೀರಕ್ಕೆ ಮರಳಿದ.


**6**





**7** ಗುರುಗಳ ಆಶ್ರಮದಲ್ಲಿ ನಡೆದದ್ದನ್ನೆಲ್ಲ ಬೃಹತ್ಸೇನ ತನ್ನ ಪತ್ನಿಗೆ ವಿವರಿಸಿ ಹೇಳಿ ಅಳತೊಡಗಿದ.




**8** ಅವರಿಬ್ಬರೂ ದೂರ್ವಾಸರ ಬಳಿಗೆ ಹೋದರು. ಹೇಮಲತಾ ಅವರಿಗೆ ಕೈಮುಗಿದು ಪ್ರಾರ್ಥಿಸಿಕೊಂಡಳು.



**9** ಕರುಳು ಕರಗಿಸುವಂತೆ ಆಕೆ ಮಾಡಿದ ಪ್ರಾರ್ಥನೆ ದೂರ್ವಾಸರ ಹೃದಯವನ್ನು ಕರಗಿಸಲಿಲ್ಲ. ದೂರ್ವಾಸರ ತೊಡೆಗೆ ಉಂಟಾಗಿದ್ದ ಸಣ್ಣಗಾಯವೆಲ್ಲಿ – ಗುರುಶಾಪದಿಂದ ತನ್ನ ಪತಿಯ ಹೃದಯದಲ್ಲಿ ಉಂಟಾಗಿರುವ ಘೋರ ಯಾತನೆಯಲ್ಲಿ! ಅವುಗಳ ನಡುವಿನ ಅಂತರವನ್ನು ಕಂಡು ಹೇಮಲತಾ ಕಿಡಿಕಿಡಿಯಾದಳು. ಹೇಮಲತಾ ಅಗ್ನಿದೇವನನ್ನು ಭಕ್ತಿಯಿಂದ ಪ್ರಾರ್ಥಿಸಿದಳು.




**10** ಪತಿವ್ರತೆಯಾದ ಹೇಮಲತಾಳ ಆಣತಿಗೆ ಅಗ್ನಿ ತಲೆಬಾಗಿದ. ಅದರ ಪರಿಣಾಮವಾಗಿ ಎಲ್ಲ ಯಜ್ಞಯಾಗಗಳ, ಮನೆ ಮನೆಗಳ ಬೆಂಕಿ ತಣ್ಣಗಾದವು. ಪರಶಿವನ ತ್ರಿಶೂಲದ ಬೆಂಕಿಯೂ ತಣ್ಣಗಾಯಿತು. ತ್ರಿಮೂರ್ತಿಗಳೆಲ್ಲ ದೂರ್ವಾಸರ ಮುಂದೆ ಪ್ರತ್ಯಕ್ಷರಾದರು.

**11** ದೂರ್ವಾಸರು ಶಿವನ ದರ್ಶನದಿಂದ ಚಕಿತರಾದರು.




**12**

